# ಜನಪದ ಸಾಹಿತ್ಯ ಮತ್ತು ಆಧುನಿಕತೆ: ಒಂದು ಅವಲೋಕನ

**ಆನಂದ ಬಾರಿಕರ**

ಬೋಧನಾ ಸಹಾಯಕರು, ಕನ್ನಡ ವಿಭಾಗ, ಕರ್ನಾಟಕ ಕಲಾ ಮಹಾವಿದ್ಯಾಲಯ, ಧಾರವಾಡ.

DOI: https://doi.org/10.5281/zenodo.17253313

## ABSTRACT:

ಜನಪದ ಸಾಹಿತ್ಯ ಮತ್ತು ಆಧುನಿಕತೆಯ ನಡುವಿನ ಸಂಬಂಧವು ಸಂಕೀರ್ಣ ಮತ್ತು ಬಹುಮುಖಿಯಾಗಿದೆ. ಜನಪದ ಸಾಹಿತ್ಯವು ಆಧುನಿಕ ಜಗತ್ತಿನ ಸಂದರ್ಭದಲ್ಲಿ ತನ್ನ ಸಾಂಪ್ರದಾಯಿಕ ರೂಪ, ವಿಷಯ ಮತ್ತು ಮಹತ್ವವನ್ನು ಹೇಗೆ ಉಳಿಸಿಕೊಳ್ಳುತ್ತದೆ ಎಂಬುದನ್ನು ಈ ಸಂಬಂಧವು ತೋರಿಸುತ್ತದೆ. ಜನಪದ ಸಾಹಿತ್ಯವು ಒಂದು ಸಮುದಾಯದ ಬದುಕಿನ ಶೈಲಿ, ಸಂಸ್ಕೃತಿ ಮತ್ತು ನಂಬಿಕೆಗಳನ್ನು ಪ್ರತಿಬಿಂಬಿಸುತ್ತದೆ. ಇದು ಮೂಲತಃ ಕೃಷಿ ಸಂಸ್ಕೃತಿ, ದೇವರುದಿಂಡಿರು, ಜಾತ್ರೆ, ಹಬ್ಬಗಳು ಮತ್ತು ಕುಟುಂಬ ಸಂಬಂಧಗಳಿಗೆ ಸಂಬಂಧಿಸಿದೆ. ಜನಪದ ಹಾಡುಗಳು, ಕಥೆಗಳು, ಒಗಟುಗಳು ಮತ್ತು ಗಾದೆ ಮಾತುಗಳು ಮೌಖಿಕವಾಗಿ ತಲೆಮಾರುಗಳಿಂದ ಹರಿದುಬಂದಿವೆ. ಈ ಸಾಹಿತ್ಯವು ಒಂದು ಸಮುದಾಯದ ಸಾಮೂಹಿಕ ಸ್ಮೃತಿ ಮತ್ತು ಜ್ಞಾನದ ಆಗರವಾಗಿದೆ.

ಪ್ರಸ್ತುತ ಲೇಖನದಲ್ಲಿ ಜಾನಪದ ಸಾಹಿತ್ಯ ಮೇಲೆ ಆಧುನಿಕತೆಯ ಪರಿಣಾಮಗಳು ಮತ್ತು ಒಡ್ಡಿರುವ ಸವಾಲುಗಳ ಪರಾಮರ್ಶನ ಅತ್ಯವಶ್ಯಕವಾಗಿದೆ. ಈ ನಿಟ್ಟಿನಲ್ಲಿ ಜಾನಪದ ಸಾಹಿತ್ಯ ಮತ್ತು ಆಧುನಿಕರಣದಲ್ಲಿ ಪ್ರಧಾನವಾಗಿ ಶಿಕ್ಷಣ, ನಗರೀಕರಣ, ತಂತ್ರಜ್ಞಾನ ಇವು ಆಧುನಿಕ ಸಂದರ್ಭದಲ್ಲಿ ಜನಪದ ಸಾಹಿತ್ಯದ ಪುನರುಜ್ಜೀವನಕ್ಕೆ ಕಾರಣವಾಗಿವೆ. ಟಿ.ವ್ಹಿ., ಕಂಪ್ಯೂಟರ್, ಲ್ಯಾಪ್‌ಟಾಪ್ ಮತ್ತು ಮೋಬೈಲ್ ಮಾಧ್ಯಮಗಳಲ್ಲಿರುವ ಯೂಟ್ಯೂಬ್, ಫೇಸ್‌ಬುಕ್ ಮತ್ತು ಇನ್‌ಸ್ಟಾಗ್ರಾಂನಂತಹ ತಂತ್ರಜ್ಞಾನಗಳ ಮೂಲಕ ಪ್ರಸಾರವಾಗುವ ಸಂಸ್ಕೃತಿ ಕಾರ್ಯಕ್ರಮಗಳಲ್ಲಿ, ಸಿನಿಮಾ, ರಂಗಭೂಮಿ ನಾಟಕಗಳಲ್ಲಿ ಜನಪದ ಹಾಡುಗಳು, ಕಥೆಗಳು ಆಧುನಿಕ ರೂಪದಲ್ಲಿ ಬಳಸಲ್ಪಡುತ್ತಿವೆ. ಆಧುನಿಕತೆಯು ಜನಪದ ಸಾಹಿತ್ಯಕ್ಕೆ ಸವಾಲುಗಳನ್ನು ಒಡ್ಡಿದರೂ, ಅದು ಅದಕ್ಕೆ ಹೊಸ ಜೀವನ ಮತ್ತು ವೇದಿಕೆಗಳನ್ನು ಒದಗಿಸಿದೆ. ಇದು ಜನಪದ ಸಾಹಿತ್ಯದ ರೂಪವನ್ನು ಬದಲಿಸಿರಬಹುದು, ಆದರೆ ಅದರ ಮೂಲ ಸಾರ ಮತ್ತು ಮೌಲ್ಯಗಳು ಇಂದಿಗೂ ಉಳಿದಿವೆ. ಹೀಗೆ ಪ್ರಸ್ತುತ ಲೇಖನದಲ್ಲಿ ಕೆಲವು ಪ್ರಮುಖ ವಿಷಯಗಳ ಮೇಲೆ ಬೆಳಕು ಚೆಲ್ಲುವ ಪ್ರಯತ್ನವನ್ನು ಸಾದ್ಯಂತವಾಗಿ ಮಾಡಿದೆ.

## KEYWORDS:

ಜನಪದ ಸಾಹಿತ್ಯ, ಆಧುನಿಕತೆ, ಆಧುನಿಕತೆಯ ಸವಾಲುಗಳು, ರೂಪಾಂತರ, ತಂತ್ರಜ್ಞಾನದ ಪ್ರಭಾವ.

ಭೂಮಿ, ನೀರು, ಬನದಸಿರಿಯಂತೆಯೇ ಜನಪದ ಸಾಹಿತ್ಯವು ಸುಂದರವಾದ ಅದ್ವಿತೀಯವೂ ಹೌದು. ಈ ಸಾಹಿತ್ಯವು ತಲೆಮಾರಿನಿಂದ ತಲೆಮಾರಿಗೆ ಉಳಿದು, ಬೆಳೆದು ಬಂದಿದೆ. ಜನಪದ ಸಾಹಿತ್ಯವು ಪಂಡಿತರ, ಶಿಷ್ಟಕವಿಗಳ ಕಪಿಮುಷ್ಟಿಯಲ್ಲಿ ಎಂದಿಗೂ ಸಿಲುಕಿಕೊಂಡಿದ್ದಿಲ್ಲ. ಆದರೆ ಇಂದಿನ ಆಧುನಿಕ ತಂತ್ರಜ್ಞಾನದಲ್ಲಿ ಅದು ಬೆಂದು ಬಳಲಿದ್ದು, ಅದರ ಮೂಲ ಅಸ್ತಿತ್ವಕ್ಕೆ ಧಕ್ಕೆ ಬಂದಿರುವುದು ವಿಪರ್ಯಾಸವೇ ಸರಿ. ಆದಾಗ್ಯೂ ಅದರ ಸರ್ವತೋಮುಖವಾದ ಬೆಳವಣಿಗೆಗೆ ಸ್ಫೂರ್ತಿ, ಚೈತನ್ಯವೂ ಅದೆಲ್ಲಿಂದಲೋ ಜನಪದದವರು ತಂದುಕೊಟ್ಟು ಉಳಿಸಿಕೊಂಡಿದ್ದಾರೆ. ಅದರ ಮೂಲ ಅಸ್ತಿತ್ವಕ್ಕೆ ಅಸ್ಮಿತೆಗೆ ಉತ್ಸಾಹವನ್ನು ಕುಂದದಂತೆ ಮುನ್ನೆಲೆಗೆ ತರುವ ಪ್ರಯತ್ನವಂತೂ ನಿತ್ಯ ನಡೆಯುತ್ತಲೇ ಇದೆ.

ಅದಕ್ಕಾಗಿಯೇ ವಿದ್ವಾಂಸರಾದ ಜಿ.ಶಂ. ಪರಮಶಿವಯ್ಯ ಅವರು ‘‘ಅರಮನೆ ಗುರುಮನೆಗಳ ಸೆರೆಮನೆಯಲ್ಲಿ ಬಂಧಿತವಾಗದೆ ತಾನು ಬಯಲು ಬಿತ್ತರದಲ್ಲಿ ಸ್ವಚ್ಛಂದವಾಗಿ ಹರಿದು ಸಾಮಾನ್ಯ ಜನತೆಯ ಬದುಕಿನ ಉಸಿರಾಯಿತು’’[1] ಎಂದು ಹೇಳಿದ್ದಾರೆ. ಕಲಾವಿದರ ರಾಗಭಾವನೆಗಳನ್ನು, ಆಚಾರವಿಚಾರ ನಡೆನುಡಿಗಳನ್ನು, ಪಾಲಿಸಿಪೋಷಿಸುವ, ಸಂಸ್ಕರಿಸುವ, ಸಂರಕ್ಷಿಸುವ ದಿವ್ಯ ಸಂಜೀವಿನಿಯಾಗಿದೆ ಎನ್ನಬಹುದು.

ಜನಪದ ಸಾಹಿತ್ಯ ತೀರಾ ಹಳೆಯದಾದ್ದು ಈ ಭೂಮಿಯ ಮೇಲೆ ಎಂದು ಮಾನವ ಉದಯಿಸಿದನೋ ಅಂದೇ ಜನಪದ ಸಾಹಿತ್ಯದ ಹುಟ್ಟು ಪಡೆದಿದೆ. ಅದು 'ಜನಪದ' ಎಂಬ ಶಬ್ದ ಸೃಷ್ಟಿಯಾಗುವುದಕ್ಕೆ ಮೊದಲೇ ಇತ್ತು. ಆದರೆ ಹೆಚ್ಚು ವಿಸ್ತಾರವಾದ ವಿಷಯವನ್ನು ಒಳಗೊಂಡ ಒಂದು ಶಾಸ್ತ್ರೀಯ ವಿಷಯವಾಗಿ ಅಧ್ಯಯನಕ್ಕೆ ಒಳಪಟ್ಟಿದ್ದು, ಅದಕ್ಕೆ ಪಾಶ್ಚಿಮಾತ್ಯರ 'Folklore' ಎಂಬ ಪಾರಿಭಾಷಿಕ ಪದದಿಂದಾಗಿ ಮಹತ್ವ ಬಂದಿತು. ಇದು ತನ್ನ ವಿಶಾಲವಾದ ಒಡಲಿನಲ್ಲಿ ಅನಂತ ಮುಖಗಳನ್ನು ಅಡಗಿಸಿಕೊಂಡು ಒಂದು ಜನಾಂಗದ ಸಾಂಸ್ಕೃತಿಕ, ಸಾಮಾಜಿಕ, ಸಾಂಪ್ರದಾಯಿಕ ಹೀಗೆ ಎಲ್ಲ ಆಯಾಮಗಳಲ್ಲಿಯೂ ಅದು ಆ ಜನಾಂಗದ ಜೀವಾಳವಾಗಿದೆ. ಜನಪದರ ಒಂದು ಗಾದೆ, ನುಡಿಗಟ್ಟು, ಒಡಪು, ಒಗಟು, ಕಥೆ, ಕಾವ್ಯ ಎಲ್ಲವೂ ಅದನ್ನು ಬೆಳೆಸಿಕೊಂಡು ಬಂದ ಜನಾಂಗದ ಜೀವನಕ್ಕೆ ಹಿಡಿದ ಕೈ ಕನ್ನಡಿಯೇ ಆಗಿದೆ. ‘‘Folk Literature' ಈ 'Folklore' ಒಂದು ಅಂಗವಾಗಿ ಮಾತ್ರ ಈಗ ಉಳಿಯಿತು’’[2] ಎಂದು ವಿದ್ವಾಂಸರು ಜನಪದ ಅಥವಾ 'Folklore' ಪದದ ನಿಷ್ಪತ್ತಿ ಬಗೆಗೆ ಹೇಳಿದ್ದಾರೆ. ಆಸಕ್ತರ ಕುತೂಹಲಕ್ಕಾಗಿ, ಅಲಂಕಾರ ದೃಷ್ಟಿಗೆ ಮಾತ್ರ ಸೀಮಿತವಾಗಿ ವಿಶೇಷ ಮನ್ನಣೆ ಪಡೆಯುತ್ತಿದ್ದ ಒಂದು ವಿಷಯ 'ಜಾನಪದ ವಿಜ್ಞಾನ' ಎಂಬ ಗೌರವಕ್ಕೆ ಪಾತ್ರವಾಗಿ ತನ್ನ ಘನತೆಯನ್ನು ವ್ಯಾಪ್ತಿಯನ್ನು ಹೆಚ್ಚಿಸಿಕೊಂಡಿದೆ.

**ಜನಪದ ಸಾಹಿತ್ಯ ಎಂದರೇನು?**

ಜನಪದ ಸಾಹಿತ್ಯ ಒಂದು ನಿರ್ದಿಷ್ಟ ಸಮುದಾಯದ ಜನರ ದೈನಂದಿನ ಜೀವನ, ಸಂಸ್ಕೃತಿ, ನಂಬಿಕೆಗಳು, ವಿವಿಧ ವಿಧಾನಗಳು, ಆಚರಣೆಗಳು ಮತ್ತು ಇತಿಹಾಸವನ್ನು ಪ್ರತಿಬಿಂಬಿಸುವ ಸಾಹಿತ್ಯ ಪ್ರಕಾರವಾಗಿದೆ. ಇದು ಸಾಮಾನ್ಯವಾಗಿ ಬಾಯಿಂದ ಬಾಯಿಗೆ ಹರಿದು ಬಂದದ್ದು, ಪ್ರಾದೇಶಿಕ ಭಾಷೆ, ಉಪಭಾಷೆ ಮತ್ತು ಸಂಪ್ರದಾಯಗಳಿಗೆ ಅನುಗುಣವಾಗಿರುತ್ತದೆ. ಗಾದೆಗಳು, ಕಥೆಗಳು, ಒಗಟುಗಳು, ಒಡಪುಗಳು, ಜನಪದ ಗಣಿತ, ಜನಪದ ಗೀತೆಗಳು, ಐತಿಹ್ಯಗಳು, ಲಾವಣಿಗಳು ಹೀಗೆ ಜನಪದ ಸಾಹಿತ್ಯವು ಜನಜೀವನದ ಎಲ್ಲವನ್ನು ಒಳಗೊಂಡಿರುವ ಹಾಗೂ ಎಲ್ಲ ಪ್ರಕಾರದ ಜ್ಞಾನಗಳಿಗೆ ಮೂಲವಾಗಿದೆ. ಇವು ಸಾಮಾನ್ಯವಾಗಿ ಹಳ್ಳಿಯ ಜನರು ಮೌಖಿಕವಾಗಿ ಉಳಿಸಿ, ಬೆಳೆಸಿಕೊಂಡ ಮೌಖಿಕ ಸಾಹಿತ್ಯವೇ ಜನಪದ ಸಾಹಿತ್ಯವೆಂದು ವ್ಯಾಪಕವಾಗಿ ಕರೆಯಬಹುದು.

**ಆಧುನಿಕತೆ ಎಂದರೇನು?**

ಆಧುನಿಕತೆಯು 19ನೇ ಮತ್ತು 20ನೇ ಶತಮಾನಗಳಲ್ಲಿ ವೇಗವಾಗಿ ಬೆಳೆದ ಸಾಮಾಜಿಕ, ಸಾಂಸ್ಕೃತಿಕ, ಆರ್ಥಿಕ, ಶೈಕ್ಷಣಿಕ ಮತ್ತು ರಾಜಕೀಯ ಬದಲಾವಣೆಗಳನ್ನು ಸೂಚಿಸುತ್ತದೆ. ಇದು ಔದ್ಯೋಗಿಕರಣ, ನಗರೀಕರಣ, ಜಾಗತೀಕರಣ ಹಾಗೂ ವೈಜ್ಞಾನಿಕ ಆವಿಷ್ಕಾರಗಳ, ತಂತ್ರಜ್ಞಾನದ ಪ್ರಗತಿಯನ್ನು ಸಾಧಿಸುತ್ತದೆ ಮತ್ತು ವ್ಯಕ್ತಿವಾದದ ಉದಯವನ್ನು ಸಾರುತ್ತದೆ. ಆಧುನಿಕತೆಯು ಜೀವನಶೈಲಿ, ಚಿಂತನಾಕ್ರಮ ಮತ್ತು ಸೃಜನಶೀಲ ಅಭಿವ್ಯಕ್ತಿಗಳನ್ನು ಹೊಸ ರೀತಿಯಲ್ಲಿ ರೂಪಿಸುತ್ತಲೇ ನಡೆದಿದೆ.

**ಆಧುನಿಕತೆಯ ಪರಿಣಾಮಗಳು:**

ಆಧುನಿಕತೆಯು ಮುಖ್ಯವಾಗಿ ತಂತ್ರಜ್ಞಾನ, ಶಿಕ್ಷಣ ಮತ್ತು ನಗರೀಕರಣದ ಮೂಲಕ ಜನಪದ ಸಾಹಿತ್ಯದ ಮೇಲೆ ಪರಿಣಾಮ ಬೀರಿದೆ, ಬೀರುತ್ತಲೇ ಇದೆ. ಕೆಲವು ಧನಾತ್ಮಕವಾದ ಪರಿಣಾಮಗಳಾದರೆ ಮತ್ತೆ ಕೆಲವು ಋಣಾತ್ಮಕವಾದ ಪರಿಣಾಮವನ್ನು ಜನಪದ ಸಾಹಿತ್ಯದ ಮೇಲೆ ಬೀರಿವೆ. ಅವುಗಳಲ್ಲಿ ಕೆಲವನ್ನು ಇಲ್ಲಿ ಪಟ್ಟಿಮಾಡಬಹುದು.

**ಋಣಾತ್ಮಕವಾದ ಪರಿಣಾಮಗಳಲ್ಲಿ:**

ನಗರೀಕರಣದಿಂದಾಗಿ ಹಳ್ಳಿಗಳಿಂದ ನಗರಗಳಿಗೆ ವಲಸೆ ಹೋಗುತ್ತಿರುವ ಜನರು ತಮ್ಮ ಜೊತೆಗೆ ಸಾಂಪ್ರದಾಯಿಕ ಕಲೆ ಮತ್ತು ಸಂಸ್ಕೃತಿಯನ್ನು ಕೊಂಡೊಯ್ಯಲು ಸಾಧ್ಯವಾಗುತ್ತಿಲ್ಲ.

ತಂತ್ರಜ್ಞಾನದಿಂದಾಗಿ ಟಿ.ವ್ಹಿ. ಮತ್ತು ಮೋಬೈಲ್‌ನಂತಹ ಆಧುನಿಕ, ಆಧುನಿಕೋತ್ತರ ಮಾಧ್ಯಮಗಳು ಜನಪದ ಕಲೆಗಳ ಜನಪ್ರಿಯತೆಯನ್ನು ಕಡಿಮೆ

ಮಾಡಿವೆ.

ಹೊಸ ಶಿಕ್ಷಣ ಪದ್ಧತಿಗಳು ಮತ್ತು ವೈಜ್ಞಾನಿಕ ಮನೋಭಾವವು ಜನಪದ ಕಥೆಗಳಲ್ಲಿನ ನಂಬಿಕೆಗಳನ್ನು ಪ್ರಶ್ನಿಸುತ್ತವೆ.

**ಧನಾತ್ಮಕ ಪರಿಣಾಮಗಳಲ್ಲಿ:**

ಟಿವಿ, ಮೊಬೈಲ್ ಮಾಧ್ಯಮಗಳ ಮೂಲಕ ಅನೇಕ ವೈವಿಧ್ಯಮಯವಾದ ಕಾರ್ಯಕ್ರಮಗಳು, ಸಿನಿಮಾಗಳು ಮತ್ತು ರಂಗಭೂಮಿ ನಾಟಕಗಳು, ಜನಪದ ಹಾಡುಗಳು, ಕಥೆಗಳು ಏಕಕಾಲದಲ್ಲಿಯೇ ವಿಶ್ವವ್ಯಾಪಿಯಾಗಿ ಸಾವಿರಾರು ಜನರನ್ನು ತಲುಪಬಹುದಾಗಿದೆ.

ಅಲ್ಲದೇ ಜಾನಪದ ಸಾಹಿತ್ಯಕ್ಕಿರುವ ಶಕ್ತಿ, ಯುಕ್ತಿ, ಸಾಮರ್ಥ್ಯವನ್ನು ಅರಿತು ದೇಶ, ವಿದೇಶಗಳಲ್ಲಿಯೂ ಜಾನಪದ ಅಧ್ಯಯನಕ್ಕೆ, ಸಂಶೋಧನೆಗೆ ಮಹತ್ವವನ್ನು ಕಲ್ಪಿಸಲಾಗಿದೆ. ಭಾರತದಂತಹ ಹಳ್ಳಿಗಳ ದೇಶದಲ್ಲಿ ಜಾನಪದವೇ ಎಲ್ಲ ಜ್ಞಾನಗಳ ಮೂಲವಾಗಿದ್ದರಿಂದ ಭಾರತಾದ್ಯಂತ ಅನೇಕ ರಾಜ್ಯಗಳಲ್ಲಿರುವ ವಿಶ್ವವಿದ್ಯಾಲಯಗಳಲ್ಲಿ ಜಾನಪದ ಅಧ್ಯಯನ ವಿಭಾಗಗಳನ್ನು ಸ್ಥಾಪಿಸಲಾಗಿದೆ. ಅಲ್ಲದೆ ಕರ್ನಾಟಕದಲ್ಲಿ ಜಾನಪದ ಸಾಹಿತ್ಯ, ಸಂಶೋಧನೆಗಾಗಿಯೇ ಒಂದು 'ಜಾನಪದ ವಿಶ್ವವಿದ್ಯಾಲಯ'ವನ್ನು ಸ್ಥಾಪಿಸಲಾಗಿದೆ. ಇವೆಲ್ಲವೂ ಆಧುನಿಕತೆ ತಂದುಕೊಟ್ಟ ಜಾನಪದ ಸಾಹಿತ್ಯದ ಪುನರುಜ್ಜೀವನಕ್ಕೆ ಸಾಕ್ಷಿಯಾಗುತ್ತವೆ.

ಆಧುನಿಕತೆಯ ತಂತ್ರಜ್ಞಾನ ಮಾಧ್ಯಮಗಳ ಬಳಕೆಯಿಂದಾಗಿ ಜನಪದ ಸಾಹಿತ್ಯದ ವೈಜ್ಞಾನಿಕ ವಿಶ್ಲೇಷಣೆ ಮತ್ತು ಸಂರಕ್ಷಣೆಗೆ ನೆರವಾಗುತ್ತದೆ.

ಸಾಮಾಜಿಕ ಮಾಧ್ಯಮಗಳಾದ ಯುಟ್ಯೂಬ್, ಫೇಸ್ಬುಕ್ ಮತ್ತು ಇನ್‌ಸ್ಟಾಗ್ರಾಮ್‌ನಂತಹ ಇಂಟರ್‌ನೆಟ್ ಜಾಲತಾಣಗಳು ಜನಪದ ಕಲಾವಿದರಿಗೆ ವೇದಿಕೆಗಳಾಗಿ ಅವರ ಕಲೆಗಳನ್ನು ವಿಶ್ವದಾದ್ಯಂತವಾಗಿ ಪ್ರದರ್ಶಿಸಲು ಅವಕಾಶ ನೀಡುತ್ತದೆ.

ಹೀಗೆ ಆಧುನಿಕತೆಯು ಜನಪದ ಸಾಹಿತ್ಯಕ್ಕೆ ಸವಾಲುಗಳನ್ನು ಒಡ್ಡಿದರೂ ಅದು ಅದಕ್ಕೆ ಹೊಸ ಜೀವನ ಮತ್ತು ವೇದಿಕೆಗಳನ್ನು ಒದಗಿಸಿದೆ. ಆದರೆ ಎಲ್ಲದಕ್ಕೂ ಎಂದು ಹೇಳಲಾಗದು. ಏಕೆಂದರೆ ಜನಪದ ಸಾಹಿತ್ಯ ಪ್ರಕಾರಗಳಲ್ಲಿ ಕೆಲವು ಹಾಡುಗಳಿಗೆ ಹೊಡೆತ ಬಿದ್ದಿದೆ. ಉದಾಹರಣೆಗೆ ಕುಟ್ಟುವ ಹಾಡು, ಬೀಸುವ ಹಾಡು, ಹಂತಿ ಹಾಡು, ಬೇಸಾಯದ ಸಮಯದಲ್ಲಿ ಹಾಡುವ ಲಾವಣಿಗಳು ಇಂತಹ ಕೆಲವು ಜಾನಪದೀಯ ಗೀತೆಗಳು ಕಣ್ಮರೆಯಾಗಿವೆ ಎಂದು ಹೇಳಬಹುದು. ಇದು ಜನಪದ ಸಾಹಿತ್ಯದ ರೂಪವನ್ನು ಬದಲಿಸಿರಬಹುದು, ಆದರೆ ಅದರ ಮೂಲ ಸಾರ ಮತ್ತು ಮೌಲ್ಯಗಳು

ಇಂದಿಗೂ ಅಲ್ಲಲ್ಲಿ ಕೆಲವು ಜನಪದ ಕಲಾವಿದರಲ್ಲಿ ಉಳಿದಿವೆ.

**ಜನಪದ ಸಾಹಿತ್ಯ ಮತ್ತು ಆಧುನಿಕತೆಯ ನಡುವಿನ ಸಂಬಂಧ:**

ಜಾನಪದ ಸಾಹಿತ್ಯವು ಅನಾದಿ ಕಾಲದಿಂದಲೂ ಮೌಖಿಕವಾಗಿ ಹರಿದುಬಂದ, ಜನರ ಬದುಕು, ಸಂಸ್ಕೃತಿ ಮತ್ತು ನಂಬಿಕೆಗಳನ್ನು ಪ್ರತಿಬಿಂಬಿಸುವ ಸಾಹಿತ್ಯ ಪ್ರಕಾರವಾಗಿದೆ. ಕಥೆಗಳು, ಗಾದೆಗಳು, ಒಗಟುಗಳು, ಹಾಡುಗಳು, ಮತ್ತು ಕಾವ್ಯಗಳ ರೂಪದಲ್ಲಿ ಇದು ಪೀಳಿಗೆಯಿಂದ ಪೀಳಿಗೆಗೆ ಹರಿದುಬಂದಿದೆ. ಆಧುನಿಕತೆಯು ವಿಜ್ಞಾನ, ತಂತ್ರಜ್ಞಾನ, ಶಿಕ್ಷಣ ಮತ್ತು ನಗರೀಕರಣದಿಂದ ಪ್ರಭಾವಿತವಾದ ಹೊಸ ಜೀವನ ವಿಧಾನವಾಗಿದೆ. ಈ ಎರಡೂ ಪರಿಕಲ್ಪನೆಗಳು ಹೇಗೆ ಒಂದಕ್ಕೊಂದು ಸಂಬಂಧ ಹೊಂದಿವೆ ಎಂಬುದನ್ನು ಇಲ್ಲಿ ವಿವರಿಸಲಾಗಿದೆ.

ಜನಪದ ಸಾಹಿತ್ಯ ಮತ್ತು ಆಧುನಿಕತೆಯು ವಿರೋಧಾತ್ಮಕವಾಗಿ ಕಾಣಿಸಿದರೂ ಅವುಗಳು ಪರಸ್ಪರ ಪೂರಕ ಬೆರೆತುಕೊಂಡಿವೆ. ಅನಾದಿಕಾಲದಿಂದಲೂ ಮೌಖಿಕವಾಗಿ ಹರಿದು ಬಂದ ಜನರ ಬದುಕು, ಸಂಸ್ಕೃತಿ ಮತ್ತು ನಂಬಿಕೆಗಳನ್ನು ಪ್ರತಿಬಿಂಬಿಸುವ ಸಾಹಿತ್ಯ ಪ್ರಕಾರವಾಗಿ ಜನಪದರಲ್ಲಿ ಒಗಟು, ಒಡಪು, ಸೋಬಾನೆ ಪದ, ಗಾದೆ, ಕಥೆ, ಕಾವ್ಯಗಳು ಇಂದು ಪೀಳಿಗೆಯಿಂದ ಪೀಳಿಗೆಗೆ ಹರಿದು ಬಂದಿವೆ. ಆಧುನಿಕತೆಯು ವಿಜ್ಞಾನ, ತಂತ್ರಜ್ಞಾನ, ಶಿಕ್ಷಣ ಮತ್ತು ನಗರೀಕರಣದಿಂದ ಪ್ರಭಾವಿತವಾದ ಹೊಸ ಜೀವನ ವಿಧಾನವಾಗಿದೆ. ಈ ಎರಡು ಪರಿಕಲ್ಪನೆಗಳು ಹೇಗೆ ಒಂದಕ್ಕೊಂದು ಸಂಬಂಧ ಎಂಬುದನ್ನು ದೃಷ್ಟಾಂತಗಳ ಮೂಲಕ ಗುರುತಿಸಬಹುದಾಗಿದೆ.

ಆಧುನಿಕತೆಯ ಸವಾಲುಗಳು ನಗರೀಕರಣ ಮತ್ತು ತಂತ್ರಜ್ಞಾನದಿಂದ ಸಂಪ್ರದಾಯಗಳು ಮರೆಯಾಗುತ್ತಿರುವ ಬಗ್ಗೆ ಆತಂಕಗಳಿವೆ ಜಿ.ಶಂ. ಪರಮಶಿವಯ್ಯ ಅವರ ಪ್ರಕಾರ "ಜನಪದ ಸಾಹಿತ್ಯದ ಅಳಿವಿನ ಅಂಚಿಗೆ ಸರಿಯಲು ಸಿನಿಮಾ, ನಾಟಕ ಮುಂತಾದವು ಜಾನಪದದ ಅಳುವಿಗೆ ಎಷ್ಟು ಕಾರಣವೋ ಆಧುನಿಕ ವಾತಾವರಣವು ಅಷ್ಟೇ ಕಾರಣ"[3] ಎಂದಿದ್ದಾರೆ. ಹೀಗಾಗಿ ನವನವೋನ್ಮತ್ತವಾಗಿ ಹೊರಬರುವ ಆಧುನಿಕ ತಂತ್ರಜ್ಞಾನದ ಆವಿಷ್ಕಾರಗಳು, ಆ ವಾತಾವರಣವೂ ಅಷ್ಟೇ ಕಾರಣ ಎಂದು ಹೇಳುತ್ತಾರೆ. ಯುವ ಪೀಳಿಗೆಗೆ ಜನಪದ ಸಾಹಿತ್ಯದ ಪರಿಚಯ ಕಡಿಮೆ ಯಾಗುತ್ತಿರುವುದು ಈ ಕಾರಣದಿಂದಾಗಿಯೇ ಎನ್ನಬಹುದು.

ಹಾಗೆಯೇ ಆಧುನಿಕತೆಯ ಹೊಸ ಅವಕಾಶಗಳು ಆಧುನಿಕ ತಂತ್ರಜ್ಞಾನದಿಂದ ಜನಪದವನ್ನು ಉಳಿಸಲು ಮತ್ತು ವಿಸ್ತರಿಸಲು ಸಹಾಯ ಮಾಡಿವೆ. ದೂರದರ್ಶನ, ಅಂತರ್ಜಾಲ ಮತ್ತು ಡಿಜಿಟಲ್ ಮಾಧ್ಯಮಗಳ ಮೂಲಕ ಜನಪದ ಗೀತೆಗಳು ಮತ್ತು ಕಥೆಗಳು ಹೊಸ ರೂಪದಲ್ಲಿ ಪ್ರಸಾರವಾಗುತ್ತಿರುವುದು ಅದರ ಸಂರಕ್ಷಣೆಯ ದೃಷ್ಟಿಯಿಂದ ಮಹತ್ವದ ಸಾಧನಗಳು ಎನ್ನಬಹುದು.

**ಹೊಸ ರೂಪಗಳಲ್ಲಿ ಜನಪದ ಸಾಹಿತ್ಯ:** ಆಧುನಿಕತೆಯ ಪ್ರಭಾವದಿಂದ ಜನಪದ ಸಾಹಿತ್ಯವು ತನ್ನ ಮೂಲ ರೂಪದಲ್ಲಿ ಕಣ್ಮರೆಯಾಗುತ್ತಿದೆ ಎಂದು ಕೆಲವರು ಭಾವಿಸಿದ್ದಾರೆ; ವಾಸ್ತವವಾಗಿ ಅದು ಹೊಸ ರೂಪಗಳನ್ನು ಕಂಡುಕೊಳ್ಳುತ್ತಿದೆ. ಮೊದಲಿಗೆ ಕೇವಲ ಮೌಖಿಕವಾಗಿ ಹರಿದು ಬರುತ್ತಿದ್ದ ಜನಪದ ಸಾಹಿತ್ಯವು ಈಗ ಮುದ್ರಣ ಮಾಧ್ಯಮ, ಡಿಜಿಟಲ್ ಮಾಧ್ಯಮ, ಚಲನಚಿತ್ರಗಳು ಮತ್ತು ಸಂಗೀತ ಸಂವಹನ ಮಾಧ್ಯಮಗಳ ಮೂಲಕ ಆಧುನಿಕ ಸಮಾಜದ ಭಾಗವಾಗಿದೆ.

**ಚಲನಚಿತ್ರಗಳು ಮತ್ತು ನಾಟಕಗಳು:** ಅನೇಕ ಜನಪದ ಕಥೆಗಳನ್ನು ಮತ್ತು ಪುರಾಣಪುಣ್ಯ ಕಥೆಗಳನ್ನು, ಐತಿಹ್ಯಗಳನ್ನು ಪ್ರಾಸಂಗಿಕವಾಗಿ ಚಲನಚಿತ್ರಗಳಲ್ಲಿ ಮತ್ತು ನಾಟಕಗಳಲ್ಲಿ ಬಳಸಿಕೊಳ್ಳುತ್ತಿರುವುದು ಆಧುನಿಕತೆಯ ಪ್ರೇರಣೆಯಾಗಿದೆ. ಅವು ಜನಪದ ಕಥೆಗಳಿಗೆ ಹೊಸ ಮಾಧ್ಯಮ ರೂಪವನ್ನು ನೀಡಿ ಆಧುನಿಕ ಪ್ರೇಕ್ಷಕರಿಗೂ ಹತ್ತಿರವಾಗುತ್ತಿರುವುದು ನಿಜ. ಆದರೆ ಇದರಿಂದ ಮೂಲ ಜಾನಪದ ಸಾಹಿತ್ಯವು ಕಣ್ಮರೆಯಾಗಿ, ಅದರ ಮೂಲ ಅಸ್ತಿತ್ವವನ್ನು ಹುಡುಕಲು ಸಾಧ್ಯವಾಗುತ್ತಿಲ್ಲವೆನ್ನಬಹುದು.

**ಸಂಗೀತ ಮತ್ತು ನೃತ್ಯ:** "ಜನಪದರು ಹಾಡುತ್ತಲೇ ಸಾಹಿತ್ಯ ಸೃಷ್ಟಿಸಿದರು. ಇಲ್ಲಿ ಸಾಹಿತ್ಯ ಮತ್ತು ಸಂಗೀತಗಳೆರಡು ಏಕಕಾಲದಲ್ಲಿ ಜನ್ಮ ತಾಳಿದವು."[4] ಜನಪದ ಹಾಡುಗಳು ಆಧುನಿಕ ಸಂಗೀತಕ್ಕೆ ಹೊಸ ಸ್ಪರ್ಶ ನೀಡಿವೆ. ಜನಪದ ಶೈಲಿಯ ನೃತ್ಯಗಳು ಆಧುನಿಕ ನೃತ್ಯಗಳೊಂದಿಗೆ ಸೇರಿಸಿ ಹೊಸ ಪ್ರಯೋಗಗಳನ್ನು ಮಾಡಲಾಗುತ್ತಿದೆ. ಅಂತರ್ಜಾಲ, ಸಾಮಾಜಿಕ ಮಾಧ್ಯಮ ಮತ್ತು ಬ್ಲಾಗ್‌ಗಳ ಮೂಲಕ ಜನಪದ ಸಾಹಿತ್ಯವು ಮತ್ತಷ್ಟು ಜನರಿಗೆ ತಲುಪುತ್ತಿದೆ.

ಆಧುನಿಕ ಸಂದರ್ಭದಲ್ಲಿ ಜನಪದ ಸಾಹಿತ್ಯದ ಪುನರುಜ್ಜೀವನ ಆಧುನಿಕ ಸವಾಲುಗಳ ಹೊರತಾಗಿಯೂ ಜನಪದ ಸಾಹಿತ್ಯಕ್ಕೆ ಹೊಸ ವೇದಿಕೆಗಳು ದೊರೆಯುತ್ತವೆ ಅದರಲ್ಲಿ ಪ್ರಮುಖವಾಗಿ

**ಜಾನಪದ ಸಾಹಿತ್ಯದ ಪುನರುಜ್ಜೀವನ ಮತ್ತು ಸಂರಕ್ಷಣೆ:** ಆಧುನಿಕ ಕಾರಣದಿಂದ ಜಾನಪದ ಸಾಹಿತ್ಯವನ್ನು ಸಂರಕ್ಷಿಸುವ ಮತ್ತು ಅಧ್ಯಯನ ಮಾಡುವ ಅವಶ್ಯಕತೆ ಹೆಚ್ಚಾಗಿದೆ. ಶಿಕ್ಷಣ ವ್ಯವಸ್ಥೆಯಲ್ಲಿ ಜಾನಪದ ಅಧ್ಯಯನಕ್ಕೆ ಹೆಚ್ಚಿನ ಪ್ರಾಮುಖ್ಯತೆ ನೀಡಲಾಗುತ್ತಿದೆ ಅನೇಕ ವಿಶ್ವವಿದ್ಯಾಲಯಗಳಲ್ಲಿ ಜನಪದ ವಿಭಾಗಗಳು ಪ್ರಾರಂಭವಾಗಿದ್ದು ಇದು ಸಂಶೋಧಕರು, ವಿದ್ಯಾರ್ಥಿಗಳು ಮತ್ತು ಸಾಮಾನ್ಯ ಜನರಿಗೆ ಇದರ ಮಹತ್ವ ಮತ್ತು ಅರಿವು ಮೂಡಿಸಲು ಸಹಾಯ ಮಾಡುತ್ತದೆ ಈ ಅಧ್ಯಯನಗಳು ಜಾನಪದ ಸಾಹಿತ್ಯವನ್ನು ಆಧುನಿಕ ಯುಗದಲ್ಲಿ ಉಳಿಸಲು ಮತ್ತು ಅದರ ಮೌಲ್ಯವನ್ನು ಹೆಚ್ಚಿಸಲು ಸಹಕಾರಿಯಾಗಿದೆ.

**ಜನಪದರ ಸಾಂಸ್ಕೃತಿಕ ಗುರುತಿನ ಸಂರಕ್ಷಣೆ:** ಆಧುನಿಕತೆಯು ಜಾಗತಿಕ

ಮಟ್ಟದಲ್ಲಿ ಜನಪದರ ಸಂಸ್ಕೃತಿಯನ್ನು ಪ್ರಸಾರಿಸುವಲ್ಲಿ ಪ್ರಧಾನವಾಗಿ ಪ್ರಭಾವವನ್ನು ಬೀರುತ್ತಲಿದೆ. ಜಾನಪದ ಸಾಹಿತ್ಯ ಒಂದು ನಿರ್ದಿಷ್ಟ ಸಮುದಾಯದ ಸಾಂಸ್ಕೃತಿಕ ಗುರುತು ಮತ್ತು ಪರಂಪರೆಯನ್ನು ಕಾಪಾಡುವಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ಉದಾಹರಣೆಗೆ ಕರ್ನಾಟಕದಲ್ಲಿರುವ ಗೀಗೀಪದಗಳು ಉತ್ತರ ಕರ್ನಾಟಕದಲ್ಲಿ, ಹುಲಿವೇಷದ ನೃತ್ಯವು ಕರಾವಳಿ ಕರ್ನಾಟಕವನ್ನು, ಮಲೆಮಾದೇಶ್ವರ ಕಾವ್ಯಗಳು ದಕ್ಷಿಣ ಕರ್ನಾಟಕವನ್ನು, ಹೀಗೆ ಒಂದೇ ರಾಜ್ಯದಲ್ಲಿನ ಬೇರೆ ಬೇರೆ ಭಾಗದ ಜನರ ಜಾನಪದ ಕಲೆ, ಸಾಹಿತ್ಯವನ್ನು ವಿಭಿನ್ನವಾಗಿ ಪ್ರತಿನಿಧಿಸುತ್ತವೆ. ಜಾನಪದ ಕಥೆಗಳು, ಆಚರಣೆಗಳು ಮತ್ತು ನಂಬಿಕೆಗಳು ನಮ್ಮ ಇತಿಹಾಸ, ಚರಿತ್ರೆಯ ಮೌಲ್ಯಗಳನ್ನು, ಜೀವನ ಶೈಲಿಯನ್ನು ಪ್ರತಿಬಿಂಬಿಸುತ್ತವೆ. ಆಧುನಿಕತೆಯ ವೇಗದಲ್ಲಿ ಜನರು ತಮ್ಮ ಬೇರುಗಳನ್ನು ಕಳೆದುಕೊಳ್ಳದಂತೆ ಜಾನಪದ ಸಾಹಿತ್ಯ ಅವರಿಗೆ ತಮ್ಮ ಪರಂಪರೆಗೆ ಸಂಪರ್ಕದಲ್ಲಿರಲು ಸಹಾಯಮಾಡುತ್ತದೆ.

**ಜಾನಪದ ಸಾಹಿತ್ಯ ಮತ್ತು ಆಧುನಿಕ ಜೀವನದ ಮೌಲ್ಯಗಳು:**

ಜನಪದ ಸಾಹಿತ್ಯದಲ್ಲಿರುವ ಮೌಲ್ಯಗಳು, ಪಾಠಗಳು ಮತ್ತು ನೀತಿಗಳು ಇಂದಿಗೂ ಪ್ರಸ್ತುತವಾಗಿವೆ. ನ್ಯಾಯ, ನೀತಿ, ಸಹಬಾಳ್ವೆ, ಸಹಿಷ್ಣುತೆ, ಸಹಕಾರ, ತ್ಯಾಗ, ಬಲಿದಾನ, ಪ್ರಕೃತಿ ಬಗೆಗಿನ ಕಾಳಜಿ, ಭಯ, ಗೌರವ ಮತ್ತು ಸಾಮಾಜಿಕ ಸಂಬಂಧಗಳ ವಿಷಯಗಳು ಜಾನಪದ ಕಥೆಗಳಲ್ಲಿ ಮಹತ್ವವನ್ನು ಪಡೆಯುತ್ತವೆ. ಈ ಮೌಲ್ಯಗಳು ಆಧುನಿಕ ಯುಗದಲ್ಲಿಯೂ ಸಮಾಜವನ್ನು ಸುಸ್ಥಿತಿಯಲ್ಲಿಡಲು ಸಹಾಯ ಮಾಡುತ್ತವೆ. ಜಾನಪದ ಸಾಹಿತ್ಯವು ಆಧುನಿಕತೆಯಿಂದ ಕೇವಲ ಅಪಾಯವನ್ನು ಎದುರಿಸುತ್ತಿಲ್ಲ, ಬದಲಾಗಿ ಅದು ಹೊಸ ವಿಧಾನಗಳ ಮೂಲಕ ವಿಕಾಸನಗೊಳ್ಳುತ್ತಿದೆ ಎಂಬ ವಾದವೂ ಕೆಲವು ವಿದ್ವಾಂಸರಿಂದ ವ್ಯಕ್ತವಾಗುತ್ತದೆ. ಇದು ಪರಂಪರೆ ಮತ್ತು ಪ್ರಗತಿಯ ನಡುವಿನ ಒಂದು ಸೇತುವೆಯಾಗಿ ಕಾರ್ಯನಿರ್ವಹಿಸುತ್ತಿದೆ. ಆಧುನಿಕ ತಂತ್ರಜ್ಞಾನಗಳು ಜಾನಪದ ಸಾಹಿತ್ಯವನ್ನು ಸಂರಕ್ಷಿಸಲು, ಅಧ್ಯಯನ ಮಾಡಲು ಮತ್ತು ಹೊಸ ತಲೆಮಾರುಗಳಿಗೆ ತಲುಪಿಸಲು ಸಹಾಯ ಮಾಡುತ್ತಿವೆ. ಹಾಗಾಗಿ ಜನಪದ ಸಾಹಿತ್ಯ ಆಧುನಿಕ ಯುಗದಲ್ಲೂ ಜೀವಂತವಾಗಿದೆ ಮತ್ತು ತನ್ನ ಪ್ರಸ್ತುತತೆಯನ್ನು ಉಳಿಸಿಕೊಂಡಿದೆ.

**ಜಾನಪದ ಸಾಹಿತ್ಯಕ್ಕೆ ಸಂಬಂಧಿಸಿದಂತೆ ರೂಪಾಂತರ ಮತ್ತು ಹೊಸ ಅನ್ವಯಗಳು:**

ಜಾನಪದ ಸಾಹಿತ್ಯವು, ಪೀಳಿಗೆಯಿಂದ ಪೀಳಿಗೆಗೆ ಮೌಖಿಕವಾಗಿ ಹರಿದು ಬಂದಿರುವ ಒಂದು ಸಾಂಸ್ಕೃತಿಕ ಪರಂಪರೆ. ಇದು ಕೇವಲ ಕಥೆ, ಹಾಡು, ಗಾದೆಗಳಿಗೆ ಸೀಮಿತವಾಗಿಲ್ಲ. ಬದಲಾಗಿ ಜನರ ಜೀವನ ಶೈಲಿ, ಸಾಮಾಜಿಕ ಧಾರ್ಮಿಕ ಆಚಾರವಿಚಾರ, ನಂಬಿಕೆ ಅಪನಂಬಿಕೆ ಮತ್ತು ಆರ್ಥಿಕ ಚಟುವಟಿಕೆಗಳನ್ನು ಪ್ರತಿಬಿಂಬಿಸುತ್ತದೆ. ಆಧುನಿಕ ಯುಗದಲ್ಲಿ ತಂತ್ರಜ್ಞಾನದ ಅಳವಡಿಕೆ ಹಾಗೂ

ಸಾಮಾಜಿಕ ಬದಲಾವಣೆಗಳಿಂದಾಗಿ ಜಾನಪದ ಸಾಹಿತ್ಯ ರೂಪಾಂತರಗಳಿಗೆ ಒಳಗಾಗುತ್ತಿರುವುದನ್ನು ಗುರುತಿಸಬಹುದು. ಅನೇಕ ರೂಪಾಂತರಗಳು ಜನಪದ ಸಾಹಿತ್ಯದಲ್ಲಿ ಆಧುನಿಕತೆಯಿಂದ ಉಂಟಾಗಿದೆ. ಅವುಗಳಲ್ಲಿ ಶೈಕ್ಷಣಿಕ ರೂಪಾಂತರ, ಡಿಜಿಟಲ್ ರೂಪಾಂತರ, ವಾಣಿಜ್ಯ ರೂಪಾಂತರ ಎಂದು ಪ್ರಧಾನವಾಗಿ ಮೂರು ರೂಪಾಂತರಗಳನ್ನು ನೋಡಬಹುದು.

ಶೈಕ್ಷಣಿಕ ರೂಪಾಂತರದಿಂದಾಗಿ ಜಾನಪದ ಸಾಹಿತ್ಯವು ಪಠ್ಯಕ್ರಮದ ಭಾಗವಾಗಿ ವಿಶ್ವವಿದ್ಯಾಲಯಗಳು ಮತ್ತು ಕಾಲೇಜುಗಳಲ್ಲಿ ಅಧ್ಯಯನವಾಗುತ್ತವೆ. ಇದು ವಿದ್ಯಾರ್ಥಿಗಳಿಗೆ ತಮ್ಮ ಸಾಂಸ್ಕೃತಿಕ ಜನಜೀವನದ ಬಗ್ಗೆ ಆಳವಾದ ತಿಳುವಳಿಕೆಯನ್ನು ನೀಡುತ್ತದೆ. ಜಾನಪದ ಕಥೆಗಳನ್ನು ಭಾಷಾ ಕಲಿಕೆ ಮತ್ತು ಮೌಲ್ಯ ಶಿಕ್ಷಣಕ್ಕೆ ಬಳಸಲಾಗುತ್ತದೆ.

ಡಿಜಿಟಲ್ ರೂಪಾಂತರದಿಂದಾಗಿ ಸಾಂಪ್ರದಾಯಿಕ ಮತ್ತು ಸಾಮಾಜಿಕವಾಗಿ ಮೌಖಿಕದಲ್ಲಿ ಪ್ರಚಲಿತದಲ್ಲಿದ್ದ ಜಾನಪದ ಕಥೆ, ಹಾಡು, ಗಾದೆಗಳು, ನುಡಿಗಟ್ಟು, ಒಡಪು, ಒಗಟುಗಳು, ನೀತಿ ಬೋಧೆಗಳು, ಲೋಕೋಕ್ತಿಗಳು ಈಗ ಡಿಜಿಟಲ್ ಮಾಧ್ಯಮಗಳಾದ ಮೋಬೈಲ್, ಯೂಟ್ಯೂಬ್, ವಾಟ್ಸಾಪ್ ಆ್ಯಪ್‌ಗಳಲ್ಲಿ ಇತರೆ ಸಾಮಾಜಿಕ ಜಾಲತಾಣಗಳಲ್ಲಿ ಹೊಸ ರೂಪಾಂತರವನ್ನು ಪಡೆದುಕೊಂಡಿವೆ. ಇದು ಜಾನಪದ ಸಾಹಿತ್ಯದ ವ್ಯಾಪ್ತಿಯನ್ನು ಹೆಚ್ಚಿಸಿದೆ.

ವಾಣಿಜ್ಯ ರೂಪಾಂತರದಿಂದಾಗಿ ಜಾನಪದ ಕಥೆಗಳು ಚಲನಚಿತ್ರ ಮತ್ತು ಧಾರಾವಾಹಿಗಳ ವಿಷಯವಾಗಿ, ಜಾನಪದ ಗೀತೆಗಳು, ಹಾಡುಗಳು ಹೊಸ ತಂತ್ರಜ್ಞಾನ, ಶೈಲಿ, ಸಂಗೀತ ಸಂಯೋಜನೆ, ವಾದ್ಯಗಳ ಬಳಕೆಯಿಂದ ಹೊಸರೂಪದಲ್ಲಿ ಬಳಕೆ ಮಾಡಲಾಗುತ್ತಿದೆ. ಪ್ರವಾಸೋದ್ಯಮದಲ್ಲಿ ಜಾನಪದ ನೃತ್ಯ, ಹಾಡು ಮತ್ತು ಕಥೆಗಳನ್ನು ಬಳಸಿಕೊಂಡು ಪ್ರವಾಸಿಗರನ್ನು ಆಕರ್ಷಿಸಲು ಬಳಸಲಾಗುತ್ತದೆ. ಇದು ಸ್ಥಳೀಯ ಸಂಸ್ಕೃತಿಯ ಬಗ್ಗೆ ತಿಳಿಸುವುದರ ಜೊತೆಗೆ ಆರ್ಥಿಕವಾಗಿಯೂ ಸಹಾಯ ಮಾಡುತ್ತದೆ. ಜಾನಪದ ಕಥೆಗಳು ಮತ್ತು ಪಾತ್ರಗಳನ್ನು ಚಲನಚಿತ್ರ, ಕಿರುಚಿತ್ರ ಮತ್ತು ಅನಿಮೇಷನ್‌ಗಳಲ್ಲಿ ಬಳಸಿಕೊಳ್ಳಲಾಗುತ್ತಿದೆ. ಇದು ಹೊಸ ಕಲಾ ಪ್ರಕಾರಗಳನ್ನು ಸೃಷ್ಟಿಸಲು ಸಹಾಯ ಮಾಡಿದೆ.

ಹೀಗೆ ಜನಪದ ಸಾಹಿತ್ಯದಲ್ಲಿ ಆಧುನಿಕತೆಯು ಅನೇಕ ರೂಪಾಂತರ ಮತ್ತು ಅನ್ವಯಗಳಿಂದಾಗಿ ಇಂದು ಕೇವಲ ಸಂರಕ್ಷಣೆ ಮಾತ್ರವಲ್ಲದೆ, ಹೊಸ ಪೀಳಿಗೆಗೆ ತಲುಪಲು ಮತ್ತು ಸಾರ್ವಕಾಲಿಕ ಪ್ರಸ್ತುತತೆಯನ್ನು ಉಳಿಸಿಕೊಳ್ಳಲು ಸಹಾಯಕವಾಗಿದೆ. ಇತ್ತೀಚೆಗೆ ಕನ್ನಡ ಜನಪದ ಸಾಹಿತ್ಯದಲ್ಲಿ ಆಧುನಿಕತೆಯ ಸವಾಲುಗಳು ಬಹಳ ದೊಡ್ಡದಾಗಿವೆ. ಕೆಲವು ಪ್ರಮುಖ ಸವಾಲುಗಳನ್ನು ಹೀಗೆ ಗುರುತಿಸಬಹುದು

**ಮೌಖಿಕ ಪರಂಪರೆಯ ಅಳಿವು:**

ಜನಪದ ಸಾಹಿತ್ಯವು ಬಹುತೇಕ ಮೌಖಿಕ ಪರಂಪರೆಯ ಮೂಲಕ ಹರಿದು ಬಂದಿದೆ. ಆದರೆ, ಇಂದಿನ ತಂತ್ರಜ್ಞಾನ ಆಧಾರಿತ ಯುಗದಲ್ಲಿ ಬರವಣಿಗೆ, ಡಿಜಿಟಲ್ ಮಾಧ್ಯಮಗಳ ಪ್ರಾಬಲ್ಯ ಹೆಚ್ಚಿದೆ. ಇದರಿಂದ, ಹಿರಿಯರಿಂದ ಕಿರಿಯರಿಗೆ ಹಾಡು, ಕಥೆ, ಒಗಟುಗಳು ನೇರವಾಗಿ ಸಾಗುವ ಪ್ರಕ್ರಿಯೆ ಕಡಿಮೆಯಾಗಿದೆ. ಇದು ಮೌಖಿಕ ಸಂಪ್ರದಾಯವನ್ನು ದುರ್ಬಲಗೊಳಿಸುತ್ತಿದೆ.

**ತಂತ್ರಜ್ಞಾನದ ಪ್ರಭಾವ:** ದೂರದರ್ಶನ, ಅಂತರ್ಜಾಲ, ಮೊಬೈಲ್ ಫೋನ್‌ಗಳು ಮತ್ತು ಸಾಮಾಜಿಕ ಮಾಧ್ಯಮಗಳ ಜನಪ್ರಿಯತೆಯಿಂದಾಗಿ ಯುವ ಪೀಳಿಗೆ ಜನಪದ ಕಲೆ ಮತ್ತು ಸಾಹಿತ್ಯದಿಂದ ದೂರ ಸರಿಯುತ್ತಿದೆ. ಜನಪದ ಹಾಡುಗಳ ಸ್ಥಾನವನ್ನು ಸಿನಿಮಾ ಹಾಡುಗಳು, ಪಾಪ್ ಸಂಗೀತ ಆಕ್ರಮಿಸಿವೆ. ಇದರಿಂದ ಜನಪದ ಕಲೆಗಳು ತಮ್ಮ ಪ್ರೇಕ್ಷಕರನ್ನು ಕಳೆದುಕೊಳ್ಳುತ್ತಿವೆ.

**ವಾಣಿಜ್ಯೀಕರಣ ಮತ್ತು ಅಶ್ಲೀಲತೆ:** ಕೆಲವು ಸಂದರ್ಭಗಳಲ್ಲಿ, ಜನಪದ ಕಲೆಗಳನ್ನು ವಾಣಿಜ್ಯ ಉದ್ದೇಶಗಳಿಗಾಗಿ ಬಳಸಲಾಗುತ್ತಿದೆ. ಆಧುನಿಕ ಪ್ರೇಕ್ಷಕರನ್ನು ಆಕರ್ಷಿಸಲು ಜನಪದ ಹಾಡುಗಳಿಗೆ ಅಶ್ಲೀಲತೆ, ಹಿಂಸೆ ಅಥವಾ ಅಸಭ್ಯ ಅಂಶಗಳನ್ನು ಸೇರಿಸಲಾಗುತ್ತಿದೆ. ಇದು ಜನಪದ ಸಾಹಿತ್ಯದ ಮೂಲ ಸೌಂದರ್ಯ ಮತ್ತು ಪಾವಿತ್ರಕ್ಕೆ ಧಕ್ಕೆ ತರುತ್ತಿದೆ.

**ಸಂಶೋಧನೆ ಮತ್ತು ದಾಖಲಾತಿಯ ಕೊರತೆ:** ಆಧುನಿಕತೆಯ ವೇಗದಲ್ಲಿ, ಹಳೆಯ ತಲೆಮಾರಿನ ಜಾನಪದ ಕಲಾವಿದರು ಮತ್ತು ಜ್ಞಾನವಂತರು ಕೊರತೆ ಎದ್ದು ಕಾಣುತ್ತಿದೆ. ಅವರ ಜ್ಞಾನವನ್ನು ವೈಜ್ಞಾನಿಕವಾಗಿ ದಾಖಲಿಸುವ ಪ್ರಕ್ರಿಯೆ ನಿಧಾನಗತಿಯಲ್ಲಿದೆ. ಇದರಿಂದ ಅಮೂಲ್ಯವಾದ ಜನಪದ ಸಂಪತ್ತು ಕಣ್ಮರೆಯಾಗುತ್ತಿದೆ.

**ನಗರ ಸಂಸ್ಕೃತಿಯ ಪ್ರಭಾವ:** ನಗರ ಕೇಂದ್ರಿತ ಜೀವನಶೈಲಿ ಮತ್ತು ಶಿಕ್ಷಣ ಪದ್ಧತಿಗಳು ಜನಪದ ಸಂಸ್ಕೃತಿಗೆ ವಿರುದ್ಧವಾಗಿವೆ. ಶಾಲಾ ಪಠ್ಯಕ್ರಮಗಳಲ್ಲಿ ಜನಪದ ಸಾಹಿತ್ಯಕ್ಕೆ ಸೂಕ್ತ ಸ್ಥಾನಮಾನ ಸಿಗುತ್ತಿಲ್ಲ. ಇದರಿಂದ, ಯುವಕರು ತಮ್ಮ ಸಾಂಸ್ಕೃತಿಕ ಬೇರುಗಳ ಬಗ್ಗೆ ಅರಿವಿಲ್ಲದವರಾಗಿ ಬೆಳೆಯುತ್ತಿದ್ದಾರೆ.

ಈ ಸವಾಲುಗಳನ್ನು ಎದುರಿಸಲು, ಜನಪದ ಸಾಹಿತ್ಯವನ್ನು ಉಳಿಸಿ ಬೆಳೆಸಲು ಸರ್ಕಾರ, ಸಂಸ್ಥೆಗಳು ಮತ್ತು ಸಮುದಾಯಗಳು ಒಟ್ಟಾಗಿ ಕೆಲಸ ಮಾಡಬೇಕಾಗಿದೆ. ಡಿಜಿಟಲ್ ವೇದಿಕೆಗಳನ್ನು ಬಳಸಿಕೊಂಡು ಜನಪದ ಕಲೆಗಳನ್ನು ಪ್ರಚಾರ ಮಾಡುವುದು, ಶಾಲೆಗಳಲ್ಲಿ ಜನಪದ ಸಾಹಿತ್ಯಕ್ಕೆ ಆದ್ಯತೆ ನೀಡುವುದು, ಮತ್ತು ಯುವ ಪೀಳಿಗೆಗೆ ಜನಪದ ಕಲಾವಿದರೊಂದಿಗೆ ಸಂವಾದ ನಡೆಸಲು ಅವಕಾಶಗಳನ್ನು ಸೃಷ್ಟಿಸುವುದು ಬಹಳ ಮುಖ್ಯ.

ಮುಖ್ಯವಾಗಿ ಶಾಲಾ ಪಠ್ಯಕ್ರಮಗಳಲ್ಲಿ ಜನಪದ ಸಾಹಿತ್ಯಕ್ಕೆ ಸೂಕ್ತ ಸ್ಥಾನಮಾನಗಳ ಕೊರತೆ ಇದೆ. ಈ ಸವಾಲನ್ನು ಎದುರಿಸಲು ಜನಪದ ಸಾಹಿತ್ಯವನ್ನು ಉಳಿಸಿ ಬೆಳೆಸಲು ಸರ್ಕಾರ ಮತ್ತು ಖಾಸಗಿ ಸಂಘಸಂಸ್ಥೆಗಳು ಮತ್ತು ಸಮುದಾಯಗಳು ಒಗ್ಗಟ್ಟಾಗಿ ಕೆಲಸ ಮಾಡಬೇಕಾಗಿದೆ. ಡಿಜಿಟಲ್ ವೇದಿಕೆಗಳು ಬಳಸಿಕೊಂಡು ಜನಪದ ಕಥೆಗಳು ಪ್ರಸಾರ ಮಾಡುವುದು, ಶಾಲಾಕಾಲೇಜುಗಳಲ್ಲಿ ಜನಪದ ಸಾಹಿತ್ಯಕ್ಕೆ ಆದ್ಯತೆ ನೀಡುವುದು ಮತ್ತು ಯುವ ಪೀಳಿಗೆಗೆ ಜನಪದ ಕಲಾವಿದರೊಂದಿಗೆ ಸಂವಾದ ನಡೆಸಲು ಅವಕಾಶಗಳನ್ನು ಸೃಷ್ಟಿಸುವುದು ಬಹಳ ಮುಖ್ಯ. ಆ ಮೂಲಕ ಜನಪದ ಸಾಹಿತ್ಯದಲ್ಲಿ ಆಧುನಿಕತೆಯ ಹೊಸ ಅವಕಾಶಗಳನ್ನು ಸರಿಯಾದ ರೀತಿಯಲ್ಲಿ ಬಳಸಿಕೊಂಡರೆ ಜನಪದ ಸಾಹಿತ್ಯವು ಅತ್ಯುನ್ನತಿಯನ್ನು ಪಡೆಯಲು ಸಾಧ್ಯವಾಗುತ್ತದೆ.

**ಜಾನಪದ ಸಾಹಿತ್ಯದಲ್ಲಿ ಆಧುನಿಕತೆಯ ಹೊಸ ಅವಕಾಶಗಳು:**

ಜಾನಪದ ಸಾಹಿತ್ಯವು ಅನಾದಿ ಕಾಲದಿಂದಲೂ ಮೌಖಿಕ ಪರಂಪರೆಯ ಮೂಲಕ ಬೆಳೆದು ಬಂದಿದ್ದು, ಸಮಾಜದ ಸಂಸ್ಕೃತಿ, ಆಚಾರವಿಚಾರಗಳು, ಮತ್ತು ಜೀವನ ಶೈಲಿಯನ್ನು ಪ್ರತಿಬಿಂಬಿಸುತ್ತದೆ. ಆಧುನಿಕತೆಯ ಈ ಯುಗದಲ್ಲಿ, ತಂತ್ರಜ್ಞಾನ ಮತ್ತು ಹೊಸ ಮಾಧ್ಯಮಗಳು ಜಾನಪದ ಸಾಹಿತ್ಯಕ್ಕೆ ಹೊಸ ಆಯಾಮಗಳನ್ನು ಮತ್ತು ಅವಕಾಶಗಳನ್ನು ತೆರೆದಿವೆ.

**ಡಿಜಿಟಲ್ ಸಂರಕ್ಷಣೆ ಮತ್ತು ದಾಖಲೀಕರಣ:** ಜಾನಪದ ಹಾಡುಗಳು, ಕಥೆಗಳು, ಗಾದೆಗಳು ಮತ್ತು ಒಗಟುಗಳನ್ನು ಈಗ ಡಿಜಿಟಲ್ ರೂಪದಲ್ಲಿ ಸಂಗ್ರಹಿಸಿಡಬಹುದು. ಹಸ್ತಪ್ರತಿಗಳು, ತಾಳೆಗರಿಗಳು ಅಥವಾ ಕೇವಲ ಮೌಖಿಕವಾಗಿ ಉಳಿದಿರುವ ಈ ಜ್ಞಾನವನ್ನು ಆಡಿಯೋ, ವಿಡಿಯೋ ಮತ್ತು ಪಠ್ಯ ರೂಪದಲ್ಲಿ ದಾಖಲಿಸಿ, ಮುಂದಿನ ಪೀಳಿಗೆಗೆ ಸುರಕ್ಷಿತವಾಗಿ ರವಾನಿಸಬಹುದು. ಈ ಮೂಲಕ ಅವುಗಳ ನಶಿಸಿಹೋಗುವ ಅಪಾಯವನ್ನು ಕಡಿಮೆ ಮಾಡಬಹುದು.

**ಆನ್‌ಲೈನ್ ಪ್ರಸಾರ ಮತ್ತು ಪ್ರವೇಶ:** ಅಂತರ್ಜಾಲ ಮತ್ತು ಇತರ ಸಾಮಾಜಿಕ ಮಾಧ್ಯಮ ವೇದಿಕೆಗಳ ಮೂಲಕ ಜಾನಪದ ಹಾಡುಗಳನ್ನು ಮತ್ತು ಕಥೆಗಳನ್ನು ವಿಶ್ವಾದ್ಯಂತ ಪ್ರಸಾರ ಮಾಡಬಹುದು. ಈ ವೇದಿಕೆಗಳು ಯುವ ಪೀಳಿಗೆಯನ್ನು ಜಾನಪದ ಸಾಹಿತ್ಯಕ್ಕೆ ಆಕರ್ಷಿಸಲು ಸಹಾಯ ಮಾಡುತ್ತವೆ. ಹೊಸ ತಂತ್ರಜ್ಞಾನಗಳು ಜಾನಪದ ಕಲಾ ಪ್ರಕಾರಗಳಿಗೆ ಹೊಸ ರೂಪ ನೀಡಿ, ಅವುಗಳನ್ನು ಹೆಚ್ಚು ಜನಪ್ರಿಯಗೊಳಿಸುತ್ತವೆ.

**ಆಧುನಿಕ ಸಂಗೀತ ಮತ್ತು ಜಾನಪದ:** ಜಾನಪದ ಗೀತೆಗಳನ್ನು ಆಧುನಿಕ ಸಂಗೀತ ವಾದ್ಯಗಳಾದ ಗಿಟಾರ್, ಡ್ರಮ್ಸ್ ಮತ್ತು ಸಿಂಥಸೈಜರ್‌ನೊಂದಿಗೆ ಸಂಯೋಜಿಸಿ, ಹೊಸ ಸಂಗೀತ ಪ್ರಕಾರಗಳನ್ನು ಸೃಷ್ಟಿಸಬಹುದು. ಈ ಮೂಲಕ ಜಾನಪದ ಹಾಡುಗಳು

ಹೆಚ್ಚು ಆಕರ್ಷಕವಾಗಿ ಮತ್ತು ಆಧುನಿಕ ಶೈಲಿಯಲ್ಲಿ ಕೇಳುಗರನ್ನು ತಲುಪುತ್ತವೆ.

**ಅನಿಮೇಷನ್ ಮತ್ತು ವಿಡಿಯೋ ಕಥನ:** ಜಾನಪದ ಕಥೆಗಳನ್ನು ಮತ್ತು ಪುರಾಣಗಳನ್ನು ಅನಿಮೇಷನ್ ಮತ್ತು ವಿಡಿಯೋ ರೂಪದಲ್ಲಿ ಸೃಷ್ಟಿಸಬಹುದು. ಮಕ್ಕಳು ಮತ್ತು ಯುವಕರು ಈ ರೀತಿಯ ದೃಶ್ಯ ಮಾಧ್ಯಮದ ಮೂಲಕ ಜಾನಪದ ಕಥೆಗಳನ್ನು ಸುಲಭವಾಗಿ ಅರ್ಥಮಾಡಿಕೊಳ್ಳುತ್ತಾರೆ. ಇದು ಜಾನಪದ ಸಾಹಿತ್ಯವನ್ನು ಆಸಕ್ತಿದಾಯಕವಾಗಿ ಕಲಿಯಲು ಸಹಾಯ ಮಾಡುತ್ತದೆ.

**ಆನ್‌ಲೈನ್ ಕೋರ್ಸ್‌ಗಳು ಮತ್ತು ಕಾರ್ಯಾಗಾರಗಳು:** ಜಾನಪದ ಸಾಹಿತ್ಯದ ಬಗ್ಗೆ ಆನ್‌ಲೈನ್ ಕೋರ್ಸ್‌ಗಳು ಮತ್ತು ಕಾರ್ಯಾಗಾರಗಳನ್ನು ನಡೆಸಬಹುದು. ಈ ಮೂಲಕ ಜಾನಪದ ಅಧ್ಯಯನಕ್ಕೆ ಆಸಕ್ತಿ ಇರುವವರು, ಜಾನಪದ ಕಥೆಗಾರರು ಮತ್ತು ಕಲಾವಿದರಿಂದ ನೇರವಾಗಿ ಕಲಿಯಬಹುದು. ಇದು ಜಾನಪದ ಸಾಹಿತ್ಯದ ಅಧ್ಯಯನಕ್ಕೆ ಹೊಸ ಅವಕಾಶಗಳನ್ನು ಸೃಷ್ಟಿಸುತ್ತದೆ.

**ಡೇಟಾಬೇಸ್ ನಿರ್ಮಾಣ:** ವಿವಿಧ ಜಾನಪದ ರೂಪಗಳನ್ನು ಒಂದು ದೊಡ್ಡ ಡಿಜಿಟಲ್ ಡೇಟಾಬೇಸ್‌ನಲ್ಲಿ ಸಂಗ್ರಹಿಸಬಹುದು. ಸಂಶೋಧಕರು ಈ ಡೇಟಾಬೇಸ್ ಬಳಸಿಕೊಂಡು ಜಾನಪದ ಸಾಹಿತ್ಯದ ಮೇಲೆ ಆಳವಾದ ಅಧ್ಯಯನ ಮತ್ತು ವಿಶ್ಲೇಷಣೆ ನಡೆಸಬಹುದು. ಇದು ಜಾನಪದ ಸಾಹಿತ್ಯದ ಸಂಶೋಧನೆಗೆ ಹೊಸ ದಾರಿಯನ್ನು ತೆರೆಯುತ್ತದೆ.

ಹೀಗೆ, ಜನಪದ ಸಾಹಿತ್ಯವು ಒಂದು ಸಮುದಾಯದ ಬದುಕಿನ ಶೈಲಿ, ಸಂಸ್ಕೃತಿ ಮತ್ತು ನಂಬಿಕೆಗಳನ್ನು ಪ್ರತಿಬಿಂಬಿಸುತ್ತದೆ. ಇದು ಮೂಲತಃ ಕೃಷಿ ಸಂಸ್ಕೃತಿ, ದೇವರುದಿಂಡಿರು, ಜಾತ್ರೆ, ಹಬ್ಬಗಳು ಮತ್ತು ಕುಟುಂಬ ಸಂಬಂಧಗಳಿಗೆ ಸಂಬಂಧಿಸಿದೆ. ಈ ಸಾಹಿತ್ಯವು ಒಂದು ಸಮುದಾಯದ ಸಾಮೂಹಿಕ ಸ್ಮೃತಿ ಮತ್ತು ಜ್ಞಾನದ ಆಗರವಾಗಿದೆ. ಇದನ್ನು ಆಧುನಿಕ ತಂತ್ರಜ್ಞಾನ ಮತ್ತು ಮಾಧ್ಯಮಗಳ ಮೂಲಕ ಜಾನಪದ ಸಾಹಿತ್ಯದ ಸಂರಕ್ಷಣೆ, ಪ್ರಸಾರ ಮತ್ತು ಅಧ್ಯಯನಕ್ಕೆ ಹೊಸ ಆಯಾಮಗಳನ್ನು ಒದಗಿಸಿಕೊಳ್ಳಬೇಕು. ಈ ಅವಕಾಶಗಳನ್ನು ಬಳಸಿಕೊಂಡು, ನಾವು ನಮ್ಮ ಶ್ರೀಮಂತ ಜಾನಪದ ಪರಂಪರೆಯನ್ನು ಉಳಿಸಿಕೊಂಡು, ಅದನ್ನು ಹೊಸ ರೂಪದಲ್ಲಿ ಜಗತ್ತಿಗೆ ಪರಿಚಯಿಸಬಹುದು.

**ಉಪಸಂಹಾರ:**

ಜನಪದ ಸಾಹಿತ್ಯ ಅಳಿವಿನಂಚಿನಲ್ಲಿರುವುದು ದುರ್ದೈವದ ಸಂಗತಿಯಾಗಿದೆ. ಕಾರಣ ನಗರೀಕರಣದಿಂದ ಜಾನಪದದ ಸಂಗೀತ ಕಲೆಗಳ ಮೇಲೆ ಆಸಕ್ತಿ ಕಡಿಮೆ, ಏನೋ ಒಂದು ನಿರ್ಲಕ್ಷ್ಯ , ಯಾವುದೋ ತಾತ್ಸಾರ ಮನೋಭಾವ ಎಲ್ಲರಲ್ಲಿ ಬಂದಂತೆ

ಕಾಣುತ್ತಿದೆ. ಇಂದಿನ ಯುಗದಲ್ಲಿ ಡಿಜಿಟಲ್ ಮಾಧ್ಯಮ, ಇಂಟರ್ನೆಟ್, ಯೂಟ್ಯೂಬ್‌ನಂತಹ ಆಧುನಿಕ ತಂತ್ರಜ್ಞಾನಗಳಿಂದ ಜಾನಪದ ಸಾಹಿತ್ಯವನ್ನು ಮನೆಮನೆಗೆ ತಲುಪಿಸುವಂತಹ ಕೆಲಸವಾಗುತ್ತಿದ್ದರು, ಜಾನಪದ ಸಾಹಿತ್ಯ ತನ್ನ ವಿಸ್ತಾರವನ್ನು ಹೆಚ್ಚಿಸಿಕೊಳ್ಳದೆ ನಿಂತ ನೀರಾಗಿದೆ. ಜಾನಪದ ಸಾಹಿತ್ಯ ಸಂಗ್ರಹಣೆಗೆ ಆದ್ಯ ಗಮನ ನೀಡಬೇಕಾದದ್ದು ಅಗತ್ಯ. ಅದರ ಜೊತೆ ಜೊತೆಯಲ್ಲೇ ಅದರ ಸಂವರ್ಧನೆಯನ್ನು ಹುಡುಕಬೇಕು. ಜನಪರ ನಿರಾಸೆ ದೂರವಾಗಿ, ತನ್ನ ಕಲೆಗೂ ಬೆಲೆ ಇದೆ, ಮಾನ್ಯತೆ ಇದೆ ಎಂಬುವುದನ್ನು ಅರಿಯುವಂತಾಗಬೇಕು. ಗ್ರಾಮ ಕಲೆಗಳು, ಗ್ರಾಮ ಸಾಹಿತ್ಯದ ಪುನರುಜ್ಜೀವನವನ್ನು ಇನ್ನಾದರೂ ಸರಿಯಾದ ರೀತಿಯಲ್ಲಿ ಉತ್ತೇಜಿಸಲು ಪ್ರಯತ್ನ ನೀಡಬೇಕು. ರಾಜ್ಯಮಟ್ಟದ 'Folklore Academy' ಎಂದು ಸ್ಥಾಪಿತವಾಗಿ ಅದರ ಮಾರ್ಗದರ್ಶನದಲ್ಲಿ ಎಲ್ಲಾ ಜನಪದ ಕಾರ್ಯಗಳು ನಡೆಯುವಂತಾಗುವುದು ಅಗತ್ಯ. ಜನಪದ ಸಾಹಿತ್ಯದ ಬಗ್ಗೆ ವಿಶೇಷ ಪ್ರಸಾರವನ್ನು ಕೈಗೊಂಡು ಅದರ ಮಹತ್ವವನ್ನು ವಿವರಿಸುವ ಸುಲಭವಾದ ಗ್ರಂಥಗಳ ಮೂಲಕ, ಚಲನಚಿತ್ರಗಳ ಮೂಲಕ, ಕರಪತ್ರಗಳ ಮೂಲಕ ಕಾರ್ಯವನ್ನು ಸ್ಥಾಪಿಸಬೇಕು. ಒಟ್ಟಿನಲ್ಲಿ ಜನಪದ ಸಾಹಿತ್ಯದ ಉದ್ದಾರ ಜನತೆಯ ಉದ್ಧಾರವೆಂದು ಭಾವಿಸಿ ಆ ನಿಟ್ಟಿನಲ್ಲಿ ಪ್ರತಿಯೊಬ್ಬರೂ ಶ್ರಮಿಸುವುದು ಅಗತ್ಯ.

## ಕೊನೆ ಟಿಪ್ಪಣಿಗಳು:

1. ಪರಮಶಿವಯ್ಯ ಜಿ.ಶಂ., (1997), ಜನಪದ ಕೆಲವು ಮುಖಗಳು, ಚೇತನ್ ಬುಕ್ ಹೌಸ್, ಮೈಸೂರು, ಪು.ಸಂ. 1
2. ಅದೇ, ಪು.ಸಂ. 1
3. ಅದೇ, ಪು.ಸಂ. 51
4. ಶಂಕರ ನಾರಾಯಣ್ ತೀ.ನಂ., (1970), ಜಾನಪದ ಕೈಪಿಡಿ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ಪು.ಸಂ. 184

## ಪರಾಮರ್ಶನ ಗ್ರಂಥಗಳು:


1. ಪರಮಶಿವಯ್ಯ ಜಿ.ಶಂ., (1997), ಜನಪದ ಕೆಲವು ಮುಖಗಳು, ಚೇತನ್ ಬುಕ್ ಹೌಸ್, ಮೈಸೂರು.
2. ಸಿಂಪಿಲಿಂಗಣ್ಣ, (1960), ಜನಾಂಗದ ಜೀವಾಳ, ವಸಂತ ಮುದ್ರಣಾಲಯ, ಧಾರವಾಡ.
3. ಶಂಕರ ನಾರಾಯಣ್ ತೀ.ನಂ., (1970), ಜಾನಪದ ಕೈಪಿಡಿ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.
4. ಹಾಮಾನಾ, (2006), ಜಾನಪದ ಸ್ವರೂಪ, ಗೀತಾಂಜಲಿ ಪುಸ್ತಕ ಪ್ರಕಾಶನ, ಶಿವಮೊಗ್ಗ.



**Funding:**

This study was not funded by any grant.


**Conflict of interest:**

The Authors have no conflict of interest to declare that they are relevant to the content of this article.


**About the License:**

© The Authors 2024. The text of this article is open access and licensed under a Creative Commons Attribution 4.0 International License.